2020 ಕ.ತೀ.ವ 894

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

## ಶ್ರೀ ಅಂಜನ್ ಗೋಸ್ವಾಮಿ -ವಿರುದ್ಧ- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೋಲಾರ*

ದಂಡ ಪ್ರಕ್ರಿಯಾ ಸಂಹಿತೆ 482ನೇ ಪ್ರಕರಣ

ಪ್ರಸ್ತುತ ಪ್ರಕರಣದಲ್ಲಿ ಕೃಷಿ ಮಾರುಕಟ್ಟೆ ಸಮಿತಿ ಅಧಿನಿಯಮ, 1966 ಅಡಿ ನೀಡಿದ ದೂರನ್ನು ಪ್ರಶ್ನಿಸಲಾಗಿದೆ. ಅರ್ಜಿದಾರನು ದೃಢೀಕೃತ ಲೈಸೆನ್ಸ್ ಇಲ್ಲದೆ ಬೇರೆ ಬೇರೆ ಕೃಷಿ ಉತ್ಪನ್ನ ಮಾರುಕಟ್ಟೆಗಳಿಂದ ಅಕ್ಕಿ, ಗೋವಿನ ಜೋಳ ಇತ್ಯಾದಿ ವರ್ಗೀಕರಿಸಿದ ಉತ್ಪನ್ನಗಳನ್ನು ಬೃಹತ್ ಪ್ರಮಾಣದಲ್ಲಿ ಖರೀದಿಸುತ್ತಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಶೇಕಡ ಒಂದೂವರೆ ವಹಿವಾಟು ತೆರಿಗೆಯನ್ನು ನೀಡಬೇಕಿದ್ದು ಅದನ್ನು ನೀಡದೆ ವಂಚಿಸಿರುವುದರಿಂದ ಅಧಿನಿಯಮದಡಿ ದಂಡನೀಯ ಅಪರಾಧವೆಂದು ಮಾರುಕಟ್ಟೆ ಸಮಿತಿ ದೂರನ್ನು ನೀಡಿದೆ.

ಅರ್ಜಿದಾರನು 2(48)ನೇ ಪ್ರಕರಣದ ಅಡಿ ವ್ಯಾಪಾರಗಾರನೆಂದು ಪರಿಗಣಿಸಲಾಗುವುದಿಲ್ಲ. ಯಾಕೆಂದರೆ ಆತನು ಗೃಹ ಬಳಕೆಗಾಗಿ ಉತ್ಪನ್ನಗಳನ್ನು ಖರೀದಿಸುತ್ತಿದ್ದು ತನ್ನ ಕೋಳಿ ಫಾರ್ಮ್‌ಗಳಲ್ಲಿ ಮಾತ್ರ ಉಪಯೋಗಿಸುತ್ತಿರುವುದರಿಂದ ವರ್ತಕ ಎಂಬ ವಿವರಣೆ ಅಡಿ ಬರುವುದಿಲ್ಲ ಎಂದು ವಾದಿಸಿದ್ದಾರೆ.

ಮಾನ್ಯ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯದ ಪ್ರಕರಣವಾದ *ಕೃಷಿ ಉತ್ಪಾದನಾ ಮಂಡಿ ಸಮಿತಿ ಅಲಹಾಬಾದ್ -ವಿರುದ್ಧ- ಬೈದ್ಯನಾಥ್ ಆಯುರ್ವೇದ ಭವನ ಪ್ರೈವೇಟ್ ಲಿಮಿಟೆಡ್* ಮತ್ತು ಮತ್ತೊಬ್ಬರು *(2011) 12 ಎಸ್‌ಸಿಸಿ 277*ರ ಅಡಿ ನಿರ್ಣಯಿಸಿದ ಕಾನೂನಿನಂತೆ ವಾಣಿಜ್ಯ ಕಾರಣಗಳಿಗೆ ಮಾಡಿದ ಖರೀದಿದಾರನು

*ಕ್ರಿಮಿನಲ್ ಅರ್ಜಿ ಸಂಖ್ಯೆ: 163/2014, ದಿನಾಂಕ 10ನೇ ಅಕ್ಟೋಬರ್, 2019.

**ವರ್ತಕ ಎಂಬ ವಿವರಣೆ ಅಡಿ ಬರುತ್ತದೆ ಎಂದು ನಿರ್ಣಯಿಸಿ ಪ್ರಸ್ತುತ ಪ್ರಕರಣವನ್ನು ತಿರಸ್ಕರಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. (2011) 12 ಎಸ್‌ಸಿಸಿ 277<br>ಕೃಷಿ ಉತ್ಪಾದನಾ ಮಂಡಿ ಸಮಿತಿ, ಅಲಹಾಬಾದ್<br>–ವಿರುದ್ಧ– ಬೈದ್ಯನಾಥ್ ಆಯುರ್ವೇದ ಭವನ್<br>ಪ್ರೈವೇಟ್ ಲಿಮಿಟೆಡ್ ಮತ್ತು ಮತ್ತೊಬ್ಬರು* | *(ಉಲ್ಲೇ) 5* |
| *2. (2001) 3 ಎಸ್‌ಸಿಸಿ 405<br>ಜಿ. ಗಿರಿಧರ್ ಪ್ರಭು –ವಿರುದ್ಧ–<br>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ* | *(ಉಲ್ಲೇ) 9* |
| *3. ಎಐಆರ್ 1965 ಎಸ್‌ಸಿ 531<br>ಆಂಧ್ರಪ್ರದೇಶ ರಾಜ್ಯ –ವಿರುದ್ಧ–<br>ಎಚ್. ಅಬ್ದುಲ್ ಬಕಿ ಹಾಗೂ ಸಹೋದರರು* | *(ಉಲ್ಲೇ) 10* |
| *4. (1995) 1 ಎಸ್‌ಸಿಸಿ 655<br>ಕೃಷಿ ಉಪಾಜ್ ಮಂಡಿ ಸಮಿತಿ –ವಿರುದ್ಧ–<br>ಓರಿಯಂಟ್ ಪೇಪರ್ ಅಂಡ್ ಇಂಡಸ್ಟ್ರೀಸ್ ಲಿ.* | *(ಉಲ್ಲೇ) 10* |

ಅಪೀಲುದಾರರ ಪರ : ಶ್ರೀ ಗಿರಿಧರ್, ಎಚ್, ವಕೀಲರು;
ಪ್ರತ್ಯಪೀಲುದಾರರ ಪರ : ಶ್ರೀ ಟಿ. ಸ್ವರೂಪ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಜಿ. ನರೇಂದರ್ :**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿರುತ್ತೇವೆ.

2. ಈ ನ್ಯಾಯಾಲಯದ ಅರ್ಜಿದಾರರು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ)ರ 8, 65 ಹಾಗೂ 66ನೇ ಪ್ರಕರಣಗಳ ಉಪಬಂಧಗಳ ಉಲ್ಲಂಘನೆಯ ಮೇಲೆ ಹಾಗೂ 144, 117 ಹಾಗೂ 117(4)ನೇ ಪ್ರಕರಣಗಳ ಉಪಬಂಧಗಳಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಆಪಾದಿಸಿ ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣದ ಉಪಬಂಧವನ್ನು ಅನ್ವಯಿಸಿ ಪ್ರತ್ಯರ್ಜಿದಾರ ಮಾರುಕಟ್ಟೆ ಸಮಿತಿ ಕೋಲಾರ ಇದು ಸಲ್ಲಿಸಿರುವ ದೂರಿನಿಂದ ಬಾಧಿತರಾಗಿರುತ್ತಾರೆ.

3. ಅರ್ಜಿದಾರರ ವಿರುದ್ಧದ ಆರೋಪವೆಂದರೆ, ಅರ್ಜಿದಾರರಾದ, ಮೆ॥ ಖಾಡ್ಕೇಶ್ವರ್ ಹ್ಯಾಚರೀಸ್ ಪ್ರೈವೇಟ್ ಲಿ., ನ ಹಿರಿಯ ವ್ಯವಸ್ಥಾಪಕರಾಗಿದ್ದು, ಸಂಸ್ಥೆಯ ವ್ಯವಹಾರ ನಡೆಸುವಾಗ, ಮೊಟ್ಟೆ ಕೇಂದ್ರಗಳಲ್ಲಿನ ಬಳಕೆ ಹಾಗೂ ಉಪಯೋಗಕ್ಕಾಗಿ ಎಂದರೆ ಕೋಳಿಗಳಿಗೆ ಆಹಾರ ಒದಗಿಸಲು ಕೋಳಿ ಆಹಾರವನ್ನು ಉತ್ಪಾದಿಸಲು ಅಕ್ಕಿನುಚ್ಚು, ಜೋಳ ಮುಂತಾದಂಥ ಅಧಿಸೂಚಿತ ಉತ್ಪನ್ನಗಳನ್ನು ಖರೀದಿಸಿ, ತರುವಾಯ ಅವುಗಳನ್ನು ತಮ್ಮ ಗ್ರಾಹಕರಿಗೆ ಮಾರಾಟ ಮಾಡುತ್ತಾರೆ. ಅರ್ಜಿದಾರರು ಅಧಿಸೂಚಿತ ಸರಕುಗಳನ್ನು ಸಗಟು ಪ್ರಮಾಣದಲ್ಲಿ ಕೊಂಡುಕೊಳ್ಳುತ್ತಿದ್ದಾರೆ. ಅರ್ಜಿದಾರರು ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು, ಭರಮಸಾಗರ ಹಾಗೂ ರಾಣಿಬೆನ್ನೂರುಗಳಂಥ ಹಲವಾರು ಮಾರುಕಟ್ಟೆ ಪ್ರದೇಶಗಳಿಂದ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದಾರೆ. ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ಪ್ರಮಾಣದ ಖರೀದಿಯಲ್ಲಿ ನಿರತರಾಗಿರುವಂಥ ಅರ್ಜಿದಾರರು ಅಧಿನಿಯಮದ 2(48)ನೇ ಪ್ರಕರಣದಡಿಯಲ್ಲಿ ವ್ಯಾಪಾರಿ ಎಂಬ ಪರಿಭಾಷೆಯ ಪರಿಧಿಯೊಳಗೆ ಬರುತ್ತಾನೆ. ಅರ್ಜಿದಾರನು ಲೈಸೆನ್ಸನ್ನು ಪಡೆಯದೆ ಸಗಟು ಪ್ರಮಾಣಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ ವ್ಯವಹಾರವನ್ನು ನಡೆಸುತ್ತಿರುತ್ತಾನೆ. ಅರ್ಜಿದಾರನು, ಪರ್ಮಿಟ್ಟನ್ನಾಗಲೀ, ಇಲ್ಲವೇ ಆತ ಮಾರುಕಟ್ಟೆ ಶುಲ್ಕ ಸಂದಾಯವನ್ನು ಸಾಕ್ಷೀಕರಿಸಲು ದರಪಟ್ಟಿ ಅಥವಾ ಬಿಲ್ಲುಗಳನ್ನಾಗಲೀ ಹಾಜರುಪಡಿಸಲು ಸಮರ್ಥನಾಗಿರುವುದಿಲ್ಲ. ಆತನು 3,67,88,149/- ರೂಪಾಯಿಗಳ

ವಹಿವಾಟು ಕಂಡುಬಂದಿದ್ದು ಅದಕ್ಕೆ ಮಾರುಕಟ್ಟೆ ಶುಲ್ಕವಾಗಿ ವಹಿವಾಟಿನ ಮೇಲೆ ಶೇ.1 1/2ಯಷ್ಟನ್ನು ಅಂದರೆ 5,51,822/– ರೂಪಾಯಿಗಳನ್ನು ಸಂದಾಯ ಮಾಡಲು ಬದ್ಧವಾಗಿರುತ್ತಾನೆ. ಅರ್ಜಿದಾರನು, ಸದರಿ ಮೊಬಲಗನ್ನು ಸಂದಾಯ ಮಾಡದೆ ತಪ್ಪಿಸಿಕೊಂಡಿರುತ್ತಾನೆ. ಜಾರಿ ಘಟಕವು ಅರ್ಜಿದಾರನ ಆವರಣಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದಾಗ, ಅವರಿಗೆ ಸಗಟು ಪ್ರಮಾಣದಲ್ಲಿ ಅಕ್ಕಿನುಚ್ಚು ಹಾಗೂ ಜೋಳವನ್ನು ಖರೀದಿಸಿರುವ ಸಾಕ್ಷಿಯಾಗಿ ಬಿಲ್ಲುಗಳು ಹಾಗೂ ದರಪಟ್ಟಿಗಳು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಕಂಡುಬಂದಿರುತ್ತವೆ. ಅದನ್ನು ಪ್ರಶ್ನಿಸಿದಾಗ, ಅರ್ಜಿದಾರರು, ಮಾರುಕಟ್ಟೆ ಶುಲ್ಕವನ್ನು ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಪರ್ಮಿಟ್ಟು ಅಥವಾ ದಾಖಲೆಗಳನ್ನು ಹಾಜರುಪಡಿಸಲು ಅಸಮರ್ಥರಾಗಿರುತ್ತಾರೆ. ಇವುಗಳನ್ನು ಹಾಜರುಪಡಿಸಲು ಅರ್ಜಿದಾರರಿಗೆ ಅವಕಾಶ ಕಲ್ಪಿಸಿದ್ದಾಗ್ಯೂ, ಅರ್ಜಿದಾರರು, ಸದರಿ ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿಗೆ ತಮ್ಮನ್ನು, ಸಮರ್ಥಿಸಿಕೊಳ್ಳುವ ಮಾರುಕಟ್ಟೆ ಶುಲ್ಕ ಸಂದಾಯ ಹಾಗೂ ಪರ್ಮಿಟ್ಟಿನ ದಾಖಲೆಗಳನ್ನು ಬೆಂಬಲಿಸುವಂಥ ಸಾಕ್ಷ್ಯಗಳನ್ನು ಹಾಜರುಪಡಿಸಲು ವಿಫಲರಾಗಿರುತ್ತಾರೆ. ಪ್ರಾಧಿಕಾರಿಗಳಿಗೆ ಮನವರಿಕೆ ಮಾಡಿಕೊಡಲು ವಿಫಲರಾದ ಕಾರಣದಿಂದ, ಅರ್ಜಿದಾರರು ಸಂದಾಯ ಮಾಡಲು ತಪ್ಪಿಸಿಕೊಂಡ ಮೊಬಲಗಿನ ಮೂರರಷ್ಟು ದರದಲ್ಲಿ ಲೆಕ್ಕಹಾಕಿದ ದಂಡವನ್ನು ಕಟ್ಟಲು ಬದ್ಧರಾಗಿದ್ದು, ಇವರು ದಂಡ ರೂಪದಲ್ಲಿ ಸುಮಾರು 16,55,466/– ರೂಪಾಯಿಗಳ ಮೊಬಲಗನ್ನು ಸಂದಾಯ ಮಾಡಬೇಕಾಗಿತ್ತು. ಪರ್ಮಿಟ್ಟನ್ನು ಹಾಜರುಪಡಿಸಲು ವಿಫಲನಾದ್ದರಿಂದ ಅಧಿನಿಯಮದ 114, 117 ಹಾಗೂ 117(ಎ) ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದಂತಾಗುತ್ತದೆ. ಜಾರಿ ಘಟಕಕ್ಕೆ 179 ಬಿಲ್ಲುಗಳು / ದರಪಟ್ಟಿಗಳು ಕಂಡು ಬಂದಿದ್ದು ಅವುಗಳನ್ನೆಲ್ಲಾ ಜಪ್ತಿ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಅರ್ಜಿದಾರನು ಈ ನ್ಯಾಯಾಲಯದ ಮುಂದೆ ಬಂದಿರುತ್ತಾನೆ.

4. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಅಧಿನಿಯಮದ 2(48)ನೇ ಪ್ರಕರಣದ ನಿಬಂಧನೆಗಳ ಪ್ರಕಾರ ಅರ್ಜಿದಾರನು, ಗೃಹ ಬಳಕೆಗಾಗಿ ಖರೀದಿಸಿರುವುದರಿಂದ ಅವನು 'ವ್ಯಾಪಾರಿ' ಎಂಬ ಪರಿಭಾಷೆಯೊಳಗೆ ಬರುವುದಿಲ್ಲವೆಂದು ವಾದಿಸಿರುತ್ತಾರೆ. ಅರ್ಜಿದಾರನು, ಕೋಳಿ ಆಹಾರವನ್ನು

ತಯಾರಿಸುವ/ಸಂಸ್ಕರಿಸುವ ಉದ್ದೇಶಕ್ಕಾಗಿ ಖರೀದಿಯನ್ನು ಮಾಡಲಾಗಿದ್ದು, ಹಾಗೆ ಸಿದ್ಧಪಡಿಸಿದ ಕೋಳಿ ಆಹಾರವನ್ನು ಅರ್ಜಿದಾರರ ಮೊಟ್ಟೆ ಕೇಂದ್ರಗಳಿಗೆ ಮಾತ್ರ ಬಳಸಿದ್ದು, ಸಂಸ್ಕರಿಸಿದ ಅಥವಾ ಸಿದ್ಧಪಡಿಸಿದ ಕೋಳಿ ಆಹಾರವನ್ನು ಮಾರಾಟ ಮಾಡಿರುವುದಿಲ್ಲವೆಂದು ವಾದಿಸಿರುತ್ತಾರೆ. ಮುಂದುವರೆಸುತ್ತಾ, ಅರ್ಜಿದಾರನು ತನ್ನ ವ್ಯವಹಾರವನ್ನು ಮಾರುಕಟ್ಟೆ ಪ್ರದೇಶದ ಹೊರಗಡೆ ನಿರ್ವಹಿಸುತ್ತಿದ್ದರಿಂದ, ಅವನು 'ವ್ಯಾಪಾರಿ' ಎಂಬ ಪರಿಭಾಷೆಯೊಳಗೆ ಬರುವುದಿಲ್ಲವೆಂದೂ ವಾದಿಸಿರುತ್ತಾರೆ.

5. ಇದಕ್ಕೆ ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, 'ಸ್ವಂತ ಬಳಕೆ' ಪದಾವಳಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವಿಶ್ಲೇಷಿಸಿದ್ದ ***ಕೃಷಿ ಉತ್ಪಾದನಾ ಮಂಡಿ ಸಮಿತಿ, ಅಲಹಾಬಾದ್ –ವಿರುದ್ಧ– ಬೈದ್ಯನಾಥ್ ಆಯುರ್ವೇದ್ ಭವನ್ ಪ್ರೈವೇಟ್ ಲಿಮಿಟೆಡ್ ಮತ್ತು ಮತ್ತೊಬ್ಬರು***[1] ಪ್ರಕರಣದಲ್ಲಿ ಇದಕ್ಕೆ ಸಂಬಂಧಿಸಿದ ಕಾನೂನನ್ನು ವಿಧಿಸಿದೆ ಎಂದು ನಿವೇದಿಸಿಕೊಂಡಿರುತ್ತಾರೆ.

6. ಇದಕ್ಕೆ ಪ್ರತಿಯಾಗಿ, ಅರ್ಜಿದಾರರ ಪರ ಮಾನ್ಯ ವಕೀಲರು, ಮೇಲೆ ಹೇಳಿದ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದಂಥ ಅನುಪಾತವು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯವಾಗುವುದಿಲ್ಲವೆಂದು ಬಲವಾಗಿ ವಾದಿಸಿರುತ್ತಾರೆ. ವಾಸ್ತವಾಂಶಗಳ ಮೇಲೆ ಉದಾಹರಿಸಿರುವ ನಿರ್ಣಯದಲ್ಲಿನ ಅಂಶಗಳು, ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಭಿನ್ನವಾಗಿವೆಯೆಂದು ನಿವೇದಿಸಿರುತ್ತಾರೆ. ಮುಂದುವರೆಸುತ್ತಾ, ಮೇಲೆ ಉದಾಹರಿಸಲಾದ ಪ್ರಕರಣದಲ್ಲಿ, ಅಧಿಸೂಚಿತ ಕೃಷಿ ಉತ್ಪನ್ನವನ್ನು 'ಚವನ್‌ಪ್ರಾಶ್' ಎಂದು ಕರೆಯುವ ಆಯುರ್ವೇದಿಕ್ ಉತ್ಪನ್ನವನ್ನು ಉತ್ಪಾದಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ಖರೀದಿಸಲಾಗಿರುತ್ತದೆ ಹಾಗೂ ಸದರಿ ಆಯುರ್ವೇದಿಕ್ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗಿರುತ್ತದೆಂದೂ ವಾದ ಮಾಡಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ, ಕೃಷಿ ಉತ್ಪನ್ನಗಳನ್ನು ಮೊಟ್ಟೆ ಕೇಂದ್ರದಲ್ಲಿನ ಕೋಳಿಗಳ

1. (2011) 12 ಎಸ್‌ಸಿಸಿ 277

ಆಹಾರಕ್ಕೆ ಆಹಾರವನ್ನು ಉತ್ಪಾದಿಸಲು ಬಳಸಲಾಗಿದೆಯೆಂದೂ ಹಾಗೂ ಅಂಥ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲಾಗಿಲ್ಲವೆಂದೂ ನಿವೇದಿಸಿಕೊಂಡಿರುತ್ತಾನೆ. ಹಾಗಾಗಿ, ಸದರಿ ನಿರ್ಣಯವು ಅನ್ವಯವಾಗುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾನೆ.

7. ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಇದೊಂದು ಮುಖ್ಯವಾದ ಕಾನೂನಿನ ಪ್ರಶ್ನೆಯೆಂದು ರೂಪಿಸಲಾಗಿರುವ ವಿಷಯವಾಗಿರುವುದರಿಂದ ಮತ್ತು ಸದರಿ ವಾದವನ್ನು ಹಾಗೂ ಸನ್ಮಾನ್ಯ ಅರ್ಜಿದಾರರು ಪ್ರಚಾರ ಮಾಡುತ್ತಿರುವ ವಾದಕ್ಕೆ ವಿರುದ್ಧವಾಗಿ ಅಭಿಪ್ರಾಯ ನೀಡುವಂತೆ ಸರ್ವೋಚ್ಚ ನ್ಯಾಯಾಲಯವನ್ನು ಕೋರಲಾಗಿರುವುದರಿಂದ, ಸದರಿ ವಿವಾದಾಂಶವನ್ನು ಮೇಲೆ ಹೇಳಿದ ನಿರ್ಣಯದ 11ನೇ ಕಂಡಿಕೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮುಖ್ಯವಾದ ಕಾನೂನಿನ ಪ್ರಶ್ನೆಯನ್ನು ರೂಪಿಸಿದ್ದು, ಅದು ಈ ಮುಂದಿನಂತಿದೆ:

> *"11. ಅಪೀಲು ಈ ಮುಂದಿನ ಮುಖ್ಯವಾದ ಪ್ರಶ್ನೆಯನ್ನು ಪ್ರಸ್ತಾಪಿಸಿರುತ್ತದೆ:*
>
> *ನಿರ್ದಿಷ್ಟಪಡಿಸಿದ ಮಾರುಕಟ್ಟೆ ಪ್ರದೇಶದೊಳಗೆ 1ನೇ ಪ್ರತ್ಯರ್ಜಿದಾರನು ಖರೀದಿಸಿ, ವಾಣಿಜ್ಯ ಉತ್ಪನ್ನಗಳನ್ನು ಸಿದ್ಧಪಡಿಸಲು ಬಳಸಿರುವ ನಿರ್ದಿಷ್ಟಪಡಿಸಿದ ಕೃಷಿ ಉತ್ಪನ್ನಗಳನ್ನು ಗೃಹ ಬಳಕೆಗಾಗಿ ಮಾಡಲಾಗಿದೆಯೆಂದು ಅಭಿಪ್ರಾಯಪಡಬಹುದೇ ಮತ್ತು ಆ ಮೂಲಕ ಅವುಗಳಿಗೆ 1964ರ ಅಧಿನಿಯಮದ 9(2) ಪ್ರಕರಣದಡಿಯಲ್ಲಿ ಲೈಸೆನ್ಸನ್ನು ಪಡೆಯುವುದರಿಂದ ಹಾಗೂ 17(iii) (ಬಿ) ಪ್ರಕರಣದಡಿಯಲ್ಲಿ ಮಾರುಕಟ್ಟೆ ಶುಲ್ಕವನ್ನು ವಿಧಿಸುವುದರಿಂದ ಹಾಗೂ ಸಂದಾಯ ಮಾಡುವುದರಿಂದ ವಿನಾಯಿತಿ ನೀಡಬಹುದೆ?"*

8. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕೃಷಿ ಉತ್ಪನ್ನದ ಪರಿಭಾಷೆ ಹಾಗೂ 'ವ್ಯಾಪಾರಿ' ಎಂಬ ಪದದ ಪರಿಭಾಷೆಯನ್ನು ಒಳಗೊಂಡಂತೆ ಅಧಿನಿಯಮದ

ಹಲವಾರು ಉಪಬಂಧಗಳನ್ನು ಅದರಲ್ಲೂ ವಿಶೇಷವಾಗಿ, ಗೃಹ ಬಳಕೆಗಾಗಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವುದರ ಮೇಲೆ ಅಧಿನಿಯಮದ, ಅನ್ವಯವನ್ನು ಹೊರತುಪಡಿಸುವಂಥ ಉತ್ತರ ಪ್ರದೇಶ ಕೃಷಿ ಉತ್ಪಾದನಾ ಮಂಡಿ ಅಧಿನಿಯಮ, 1964ರ 9ನೇ ಪ್ರಕರಣವನ್ನು ಪರಿಶೀಲಿಸಿದ ತರುವಾಯ, ಅರ್ಜಿದಾರರ ಪರ ವಕೀಲರು ಪ್ರಸ್ತುತ ಮಂಡಿಸಿದ ವಾದಕ್ಕೆ ತದ್ವಿರುದ್ಧ ಅಭಿಪ್ರಾಯವನ್ನುಪಟ್ಟಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ರೂಪಿಸಿದ ಮುಖ್ಯವಾದ ಕಾನೂನಿನ ಪ್ರಶ್ನೆ ಮತ್ತು ನೀಡಿದ ಸದರಿ ತೀರ್ಪುಗಳ ಅನುಪಾತವು ಅರ್ಜಿದಾರರು ವಾದಿಸಿದ ವಾದವನ್ನು ಸ್ಪಷ್ಟವಾಗಿ ನಿರಾಕರಿಸಿರುತ್ತದೆ.

9. ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಜಿ. ಗಿರಿಧರ್ ಪ್ರಭು -ವಿರುದ್ಧ- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ***[2] ಪ್ರಕರಣದಲ್ಲಿ ನೀಡಿದ ತನ್ನದೇ ತೀರ್ಪನ್ನು ಉದಾಹರಿಸಿದ ತರುವಾಯ, 'ವ್ಯಾಪಾರಿ' ಎಂಬ ಪರಿಭಾಷೆಯನ್ನು ಪುನರ್ ಪರಿಶೀಲಿಸುವಂತೆ ಹಾಗೂ ಇದು ಕೇವಲ ಖರೀದಿ ವ್ಯವಹಾರವನ್ನು ಮಾತ್ರವಲ್ಲದೆ, ಇಡೀ ಖರೀದಿ, ಸಂಸ್ಕರಣೆ ಉತ್ಪಾದನೆ ಹಾಗೂ ಮಾರಾಟದ ಪ್ರಕ್ರಿಯೆಯನ್ನು ತನ್ನ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತದೆಂದು ಅಭಿಪ್ರಾಯಪಡುವಂತೆ ಕೋರಲಾಯಿತು. ಮುಂದುವರೆಸುತ್ತಾ, ಸದರಿ ಪ್ರಕರಣದಲ್ಲಿ, ನಿರ್ದಿಷ್ಟ ಕೃಷಿ ಉತ್ಪನ್ನವನ್ನು ಖರೀದಿಸಿ ಅವುಗಳನ್ನು ಮಾರಾಟಕ್ಕಾಗಲೀ, ಉತ್ಪಾದನೆಗಾಗಲೀ, ಸಂಸ್ಕರಣೆಗಳಿಗಾಗಲಿ ಬಳಸಿದಂಥ ಹಾಗೂ ಅವುಗಳಿಂದ ಬೇರೆ ಬೇರೆ ಕೃಷಿ ಉತ್ಪನ್ನಗಳನ್ನು ಸಿದ್ಧಪಡಿಸುವಂತಹ ವ್ಯಾಪಾರಿಯು, ವ್ಯಾಪಾರಿ ಪರಿಭಾಷೆಯ ಉತ್ತರವಾಗುತ್ತದೆಂದು ಅಭಿಪ್ರಾಯಪಡುವಂತೆ ಕೋರಲಾಗಿರುತ್ತದೆ. ಮುಂದುವರೆದು, ***ಜಿ. ಗಿರಿಧರ್*** ಪ್ರಕರಣದ 17ನೇ ಪ್ಯಾರಾದಲ್ಲಿ ನೀಡಿದ ಅಭಿಪ್ರಾಯವನ್ನು ಉದಾಹರಿಸಿ, ಅದನ್ನು ಈ ಮುಂದಿನಂತೆ ಓದಲಾಗಿರುತ್ತದೆ:

2. (2001) 3 ಎಸ್‌ಸಿಸಿ 405

*"17. ನ್ಯಾಯಾಲಯವು, (ಜಿ. ಗಿರಿಧರ್ ಪ್ರಕರಣದಲ್ಲಿ) ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:*

*"17. . . . . . . . 'ವ್ಯಾಪಾರಿ' ಪದದ ಪರಿಭಾಷೆಯು ನಿರ್ಬಂಧಿತ ಪರಿಭಾಷೆಯಾಗಿರುವುದಿಲ್ಲ. ಇದನ್ನು ಕೇವಲ ಕೊಳ್ಳುವಂಥ ವ್ಯಕ್ತಿಗೆ ಮಾತ್ರ ನಿರ್ಬಂಧಿಸಲಾಗುವುದಿಲ್ಲ. ಒಬ್ಬ ವ್ಯಕ್ತಿ ಗೃಹಬಳಕೆಗೆ ಅಥವಾ ವೈಯಕ್ತಿಕ ಬಳಕೆಗಾಗಿ ಖರೀದಿಸಿದರೆ ಆತ ವ್ಯಾಪಾರಿ ಆಗಿರುವುದಿಲ್ಲ. ವ್ಯಕ್ತಿಯು, ಮಾರಾಟ ಅಥವಾ ಸಂಸ್ಕರಣೆ ಅಥವಾ ಉತ್ಪಾದನೆ ಮಾಡುವ ಉದ್ದೇಶಕ್ಕಾಗಿ ಖರೀದಿಸಿದಾಗ, ಆತ ವ್ಯಾಪಾರಿ ಆಗುತ್ತಾನೆ. ಹಾಗಾಗಿ, ಒಬ್ಬ ವ್ಯಕ್ತಿ, ಕೊಂಡು, ಸಂಸ್ಕರಿಸಿ ಅಥವಾ ಉತ್ಪಾದಿಸಿ ನಂತರ ಮಾರಾಟ ಮಾಡಬಹುದಾಗಿರುತ್ತದೆ. ಈತ ತಂದಂಥ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ಅಥವಾ ಉತ್ಪಾದನೆ ಮಾಡಿದಾಗ, ಅದು ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಮತ್ತೊಂದು ಅಧಿಸೂಚಿತ ಕೃಷಿ ಉತ್ಪನ್ನವಾಗಿ ಪರಿವರ್ತನೆಯಾಗಬಹುದು. ಹಾಗಾಗಿ, ಉದಾಹರಣೆಗಳ ಮೂಲಕ ಹೇಳುವುದಾದರೆ, ಒಬ್ಬ ವ್ಯಕ್ತಿ ಹಾಲನ್ನು ಕೊಂಡು, ಸಂಸ್ಕರಣೆಯಿಂದ ಅದನ್ನು ಬೆಣ್ಣೆ ಹಾಗೂ /ಅಥವಾ ಗಿಣ್ಣಾಗಿ ಮಾಡಿಕೊಳ್ಳಬಹುದು ಅಥವಾ ಒಬ್ಬ ವ್ಯಕ್ತಿಯು ಚರ್ಮ ಹಾಗೂ ತೊಗಲನ್ನು ಖರೀದಿಸಿ ಅದನ್ನು ಸಂಸ್ಕರಿಸಿ ಚರ್ಮೋತ್ಪನ್ನಗಳನ್ನು ಸಿದ್ಧಪಡಿಸಬಹುದಾಗಿರುತ್ತದೆ. ಆದಾಗ್ಯೂ, ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಭಿನ್ನ ಹಾಗೂ ಪ್ರತ್ಯೇಕ ರೂಪದಲ್ಲಿ ಮಾರ್ಪಡಿಸಿದ ಮಾತ್ರದಿಂದಲೇ, ಅವುಗಳನ್ನು ಕೊಂಡು, ಸಂಸ್ಕರಿಸಿ, ಮಾರಾಟ ಮಾಡಿದಂಥ ವ್ಯಕ್ತಿಯು 'ವ್ಯಾಪಾರಿ'ಆಗಿಬಿಡುತ್ತಾನೆಂದು ಅರ್ಥೈಸುವಂತಿಲ್ಲ. 'ವ್ಯಾಪಾರಿ' ಪದಾವಳಿಯು ಕೇವಲ ಖರೀದಿ ವ್ಯವಹರಣೆಯನ್ನು ಮಾತ್ರ ಸೂಚಿಸದೆ, ಖರೀದಿ, ಸಂಸ್ಕರಣೆ, ಉತ್ಪಾದನೆ ಹಾಗೂ ಮಾರಾಟಗಳ ಇಡೀ ವ್ಯವಹರಣೆಯನ್ನು ಒಳಗೊಂಡಿರುತ್ತದೆ."*

10. ಮುಂದುವರೆದು, ***ಆಂಧ್ರಪ್ರದೇಶ ರಾಜ್ಯ –ವಿರುದ್ಧ– ಎಚ್. ಅಬ್ದುಲ್ ಬಕ್ಷಿ ಹಾಗೂ ಸಹೋದರರು***[3] ಪ್ರಕರಣದಲ್ಲಿ ನೀಡಿದ ತನ್ನದೇ ತೀರ್ಪನ್ನು ಅಲ್ಲದೆ, ***ಕೃಷಿ ಉಪಾಜ್ ಮಂಡಿ ಸಮಿತಿ –ವಿರುದ್ಧ– ಓರಿಯಂಟ್ ಪೇಪರ್ ಅಂಡ್ ಇಂಡಸ್ಟ್ರೀಸ್ ಲಿ.***[4] ಪ್ರಕರಣದಲ್ಲಿನ ತನ್ನದೇ ತೀರ್ಪನ್ನು ಉದಾಹರಿಸಿ ಹಾಗೂ ಹಲವಾರು ವಿವಿಧ ತೀರ್ಪುಗಳನ್ನು ಪರಿಶೀಲಿಸಿದ ತರುವಾಯ, ಪ್ಯಾರಾ ಸಂಖ್ಯೆ. 23ರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವನ್ನು ಅನುಪಾತವನ್ನು ವಿಧಿಸಲು ಸೂಚಿಸಿ ಕೋರಲಾಯಿತು ಮತ್ತು ಗೃಹ ಬಳಕೆ ಪದದ ಅರ್ಥವನ್ನು ಒಂದು ನಿರ್ಬಂಧಿತ ರೂಪದಲ್ಲಿ ಅರ್ಥೈಸಿಕೊಳ್ಳಬೇಕಾಗಿದ್ದು, ಅದರ ಮೂಲಕ ಹೊರಟ 'ಗೃಹ ಬಳಕೆ' ಎಂಬ ಪದಕ್ಕೆ ವೈಯಕ್ತಿಕ ಬಳಕೆ ಅಂದರೆ, ಖರೀದಿದಾರನ ಕೌಟುಂಬಿಕ ಸದಸ್ಯರ ಬಳಕೆಯ ಉದ್ದೇಶಕ್ಕಾಗಿ ಬಳಸಬೇಕೇ ವಿನಾ ಯಾವುದೇ ಉತ್ಪಾದನಾ ಕಾರ್ಯ ಚಟುವಟಿಕೆಗಳಿಗೆ ನಿರ್ಬಂಧಿತವಾಗಿ ಉಲ್ಲೇಖಿಸಬಾರದೆಂದು ಅಭಿಪ್ರಾಯಪಟ್ಟಿರುತ್ತದೆ. ಮುಂದುವರೆದು, ಸಗಟು ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸುವುದನ್ನು ಗೃಹ ಬಳಕೆಗೆ ಮಾಡಲಾಗಿದೆಯೆಂದು ಪರಿಭಾಷಿಸಲಾಗಿರುವುದಿಲ್ಲವೆಂದೂ ಅಭಿಪ್ರಾಯಪಡಲಾಗಿದೆ. ಅಲ್ಲದೆ, 1964ರ ಅಧಿನಿಯಮದಡಿಯಲ್ಲಿನ 'ಗೃಹ ಬಳಕೆ' ಪದಾವಳಿಗೆ ತೀರಾ ನಿರ್ಬಂಧಿತ ಹಾಗೂ ನಿಯಮಿತ ಅರ್ಥವನ್ನು ಅಂದರೆ, ಖರೀದಿದಾರನ ವೈಯಕ್ತಿಕ ಬಳಕೆಗಾಗಿ ಅಥವಾ ಕುಟುಂಬದ ಬಳಕೆಗಾಗಿ ಮಾತ್ರವೇ ಹೊರತು ವಾಣಿಜ್ಯ ಹಾಗೂ ಕೈಗಾರಿಕಾ ಚಟುವಟಿಕೆಗಳಿಗಾಗಿ ಅಲ್ಲ ಎಂದು ಅಭಿಪ್ರಾಯಪಡಲಾಗಿರುತ್ತದೆ. ಅಲ್ಲದೆ 26ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

> *"**26**. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರತ್ಯರ್ಜಿದಾರ ಕಂಪನಿಯು, ಮಾರುಕಟ್ಟೆ ಪ್ರದೇಶದಿಂದ ನಿರ್ದಿಷ್ಟಪಡಿಸಿದ ಕೃಷಿ ಉತ್ಪನ್ನವನ್ನು ಖರೀದಿಸುವುದರಿಂದ ಹಾಗೂ ಅವುಗಳನ್ನು ಗೃಹ ಬಳಕೆಯ ಉದ್ದೇಶಕ್ಕಾಗಿ ಖರೀದಿಸದಿದ್ದುದರಿಂದ, ಕಂಪನಿಯು,*

3. ಎಐಆರ್ 1965 ಎಸ್‌ಸಿ 531

4. (195) 1 ಎಸ್‌ಸಿಸಿ 655

> *1964ರ ಅಧಿನಿಯಮದ 9(2)ನೇ ಪ್ರಕರಣದಡಿಯಲ್ಲಿ ಪರವಾನಿಗೆಯನ್ನು ಪಡೆಯುವುದು ಅಗತ್ಯವೆಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ."*

11. ಕಂಪನಿಯು, ಮಾರುಕಟ್ಟೆ ಪ್ರದೇಶದಿಂದ ನಿರ್ದಿಷ್ಟಪಡಿಸಿದ ಕೃಷಿ ಉತ್ಪನ್ನಗಳನ್ನು ಕೊಂಡುಕೊಳ್ಳುತ್ತದೆ, ಎಂದರೆ ಅದರರ್ಥ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನಲೆಯಲ್ಲಿ ಅವುಗಳನ್ನು ಗೃಹ ಬಳಕೆಗೆ ಕೊಂಡಂತಾಗುವುದಿಲ್ಲ. ವಾಸ್ತವಾಂಶದ ಈ ಹಿನ್ನೆಲೆಯಲ್ಲಿ, ಕಂಪನಿಯು, ಲೈಸೆನ್ಸ್ ಪಡೆಯುವುದು ಅಗತ್ಯವಾಗಿತ್ತು. ಅಪೀಲನ್ನು ಅಂಗೀಕರಿಸುವಾಗ, 'ಗೃಹ ಬಳಕೆ' ಎಂಬ ಪದಾವಳಿಯನ್ನು ವ್ಯಾಖ್ಯಾನಿಸುವ ಮೂಲಕ ಕಾನೂನನ್ನು ವಿಧಿಸುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವನ್ನು ಕೋರಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು, 14, 15, 18, 19, 20, 21 ಹಾಗೂ 23ನೇ ಪ್ಯಾರಾಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *14. ಮೇಲೆ ಹೇಳಿದ ಶಾಸನಾತ್ಮಕ ಉಪಬಂಧಗಳನ್ನು ಸಂಯೋಜಿಸಿ ಓದುವುದರ ಸಂಚಿತ ಪರಿಣಾಮದಿಂದಾಗಿ ಸಂಬಂಧಪಟ್ಟ ವ್ಯಕ್ತಿಯು ಲೈಸೆನ್ಸ್ ಅನ್ನು ಹೊಂದಿರದ ಹೊರತು, ಅವನು ಮಾರುಕಟ್ಟೆ ವಲಯದಲ್ಲಿನ ಯಾವುದೇ ಪ್ರದೇಶದಿಂದ ನಿರ್ದಿಷ್ಟಪಡಿಸಿದ ಕೃಷಿ ಉತ್ಪನ್ನವನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗುತ್ತದೆಂಬ ಅಭಿಪ್ರಾಯಕ್ಕೆ ಬರುತ್ತದೆ. ಕೃಷಿ ಉತ್ಪನ್ನದ ಮಾರಾಟವನ್ನು ಒಬ್ಬ ವ್ಯಕ್ತಿಗೆ 'ಚಿಲ್ಲರೆ ಮಾರಾಟ'ದಲ್ಲಿ ಆತನ 'ಗೃಹ ಬಳಕೆ'ಗಾಗಿ ಮಾರಾಟ ಮಾಡಿದಲ್ಲಿ ಆತನನ್ನು ಲೈಸೆನ್ಸ್ ಹೊಂದುವುದಕ್ಕೆ ಅಥವಾ ಮಾರುಕಟ್ಟೆ ಶುಲ್ಕವನ್ನು ಸಂದಾಯ ಮಾಡುವುದಕ್ಕೆ, ವಿನಾಯಿತಿ ನೀಡುವುದಕ್ಕೆ ಕಾನೂನು ಅವಕಾಶ ಕಲ್ಪಿಸುತ್ತದೆ.*

*15. ಪ್ರತ್ಯರ್ಜಿದಾರ ಕಂಪನಿಯು ಖರೀದಿಸಿದ ಮೇಲೆ ಹೇಳಲಾದ ಉತ್ಪನ್ನವು ಕೃಷಿ ಉತ್ಪನ್ನವಾಗಿರುತ್ತವೆಂಬುದು ನಿರ್ವಿವಾದ. ಅಪೀಲುದಾರರು ಹೊರಡಿಸಿದ ದಿನಾಂಕ: 18.4.1988ರ ಸುತ್ತೋಲೆಯ ಹಿನ್ನಲೆಯಲ್ಲಿ, ಚಿಲ್ಲರೆ ವ್ಯಾಪಾರಿ ಅದರಲ್ಲಿ ನಿಗದಿಪಡಿಸಿರುವ ಮಿತಿಗಿಂತ ಹೆಚ್ಚಿಗೆ ಯಾರೇ ವ್ಯಕ್ತಿಗೆ ಯಾವುದೇ ನಿರ್ದಿಷ್ಟ ಪಡಿಸಿದ ಕೃಷಿ ಉತ್ಪನ್ನವನ್ನು ಮಾರಾಟ ಮಾಡುವಂತಿಲ್ಲ. ಸದರಿ ಸುತ್ತೋಲೆಯಲ್ಲಿ, ಚಿಲ್ಲರೆ ವ್ಯಾಪಾರಿಯು ಗೃಹ ಬಳಕೆಗಾಗಿ ಯಾರೇ ವ್ಯಕ್ತಿಗೆ ಮಾರಾಟ ಮಾಡಬಹುದಾದಂಥ ಕೃಷಿ ಉತ್ಪನ್ನದ ಗರಿಷ್ಠ ಪ್ರಮಾಣವನ್ನು ನಿಗದಿಪಡಿಸಿದೆ. 1965ರ ನಿಯಮಗಳಡಿಯಲ್ಲಿ ಹೊರಡಿಸಿದ ಸುತ್ತೋಲೆಯು ಚಿಲ್ಲರೆ ವ್ಯಾಪಾರಿಗಳಿಂದ ಒಬ್ಬ ವ್ಯಕ್ತಿಗೆ ಮಾರಾಟ ಮಾಡುವ ಪ್ರಮಾಣ ಹಾಗೂ ಕೃಷಿ ಉತ್ಪನ್ನಗಳ ದಾಸ್ತಾನು ಮಾಡುವ ಪ್ರಮಾಣವನ್ನು ಈ ಮುಂದಿನಂತೆ ಗೊತ್ತುಪಡಿಸುತ್ತದೆ:*

| **ಚಿಲ್ಲರೆ ವ್ಯಾಪಾರಿಯು ಒಬ್ಬ ವ್ಯಕ್ತಿಗೆ ಮಾರಾಟ ಮಾಡಬಹುದಾದ ಪ್ರಮಾಣ** | **ಚಿಲ್ಲರೆ ವ್ಯಾಪಾರಿಯು ಖರೀದಿಸಬಹುದಾದ ಪ್ರಮಾಣ** |
|---|---|
| *ಬೆಲ್ಲ - 20 ಕಿ.ಗ್ರಾಂ.* | *ಬೆಲ್ಲ - 10 ಕ್ವಿಂಟಾಲ್* |
| *ನೆಲ್ಲಿಕಾಯಿ - 5 ಕಿ.ಗ್ರಾಂ.* | *ನೆಲ್ಲಿಕಾಯಿ - 1 ಕ್ವಿಂಟಾಲ್* |
| *ತುಪ್ಪ - 4 ಕಿ.ಗ್ರಾಂ.* | *ತುಪ್ಪ - 50 ಕಿ.ಗ್ರಾಂ.* |

*18.* ***ಆಂಧ್ರಪ್ರದೇಶ -ವಿರುದ್ಧ- ಎಚ್ ಅಬ್ದುಲ್ ಬಕ್ಷಿ ಮತ್ತು ಸಹೋದರರು*** *ಪ್ರಕರಣದಲ್ಲಿ, ಇಂತಹುದೇ ಪ್ರಕರಣವನ್ನು ವ್ಯವಹರಿಸುವಾಗ ಅಂದರೆ, ಆಂಧ್ರಪ್ರದೇಶದ ಸಾಮಾನ್ಯ ಸರಕುಗಳ ಮಾರಾಟಗಳ ತೆರಿಗೆ ಅಧಿನಿಯಮ, 1950ರ ಉಪಬಂಧಗಳಡಿಯಲ್ಲಿ 'ಡೀಲರ್' ಪದವನ್ನು ಪರಿಭಾಷಿಸುವಾಗ, ಉತ್ಪಾದನಾ ಪ್ರಕ್ರಿಯೆಯಲ್ಲಿನ ಬಳಕೆಗಾಗಿ ಸರಕುಗಳನ್ನು ಕೊಳ್ಳುವಂಥ ವ್ಯಕ್ತಿಯೂ*

*ಸಹ 'ವ್ಯಾಪಾರಿ' ಆಗಿರುತ್ತಾನೆಂದು ಅಭಿಪ್ರಾಯಪಡಲಾಗಿರುತ್ತದೆ. ನ್ಯಾಯಾಲಯವು ತನ್ನ ವ್ಯಾಪಾರದ ಸಂದರ್ಭದಲ್ಲಿ ತಾನು ಖರೀದಿಸಿದ ಸರಕನ್ನು ಬಳಕೆ ಮಾಡುವಂಥ ಅಥವಾ ಮಾರಾಟಕ್ಕಾಗಿ ಮತ್ತೊಂದು ಸರಕನ್ನು ವಸ್ತುವಿನ ಉತ್ಪಾದನೆಯಲ್ಲಿ ಬಳಸುವಂಥ ವ್ಯಕ್ತಿಯನ್ನು 'ವ್ಯಾಪಾರಿ' ಎಂಬುದಾಗಿ ಪರಿಗಣಿಸಬಹುದೆಂದು ಅಭಿಪ್ರಾಯಪಟ್ಟಿರುತ್ತದೆ.*

*19. ಕೃಷಿ ಉಪಾಜ್ ಮಂಡಿ ಸಮಿತಿ –ವಿರುದ್ಧ– ಓರಿಯಂಟ್ ಪೇಪರ್ ಅಂಡ್ ಇಂಡಸ್ಟ್ರೀಸ್ ಲಿ. ಪ್ರಕರಣದಲ್ಲಿ, ಎಂ.ಪಿ. ಕೃಷಿ ಉಪಾಜ್ ಮಂಡಿ ಅಧಿನಿಯಮ, 1973ರ ಸಾದೃಶ್ಯ ಉಪಬಂಧಗಳನ್ನು ಈ ನ್ಯಾಯಾಲಯವು ಪರಿಗಣಿಸಿರುತ್ತದೆ. ಸದರಿ ಪ್ರಕರಣದಲ್ಲಿ, ಗಿರಣಿಯಲ್ಲಿ ಕೃಷಿ ಉತ್ಪನ್ನವನ್ನು ಮಾರಾಟಕ್ಕಾಗಿ ಉತ್ಪಾದಿಸದೆ, ಅಂತಿಮ ಉತ್ಪನ್ನವನ್ನು ತಯಾರಿಸುವ ಸಲುವಾಗಿ ಅದರ ಕಚ್ಚಾವಸ್ತುವಿನಂತೆ ಬಳಸಿಕೊಳ್ಳಲು ಅದನ್ನು ಉತ್ಪಾದಿಸಿದ ಸಂದರ್ಭದಲ್ಲಿ ಮಾರುಕಟ್ಟೆ ಪ್ರದೇಶದಲ್ಲಿ ಮಾರಾಟಕ್ಕಾಗಿ ತಂದ ಅಥವಾ ಮಾರಾಟ ಮಾಡಿದ ಕೃಷಿ ಉತ್ಪನ್ನದ ಮೇಲೆ ಮಾರುಕಟ್ಟೆ ಶುಲ್ಕವನ್ನು ವಿಧಿಸಬಹುದೇ ಎಂಬ ಪ್ರಶ್ನೆ ಉದ್ಭವಿಸಿರುತ್ತದೆ. ಸದರಿ ಪ್ರಕರಣವು ಬಿದಿರಿನ ಬೊಂಬುಗಳನ್ನು ಕಾಗದ ತಯಾರಿಸುವುದಕ್ಕೆ ಖರೀದಿಸಿದಂಥ ರೀತಿಯಲ್ಲಿದೆ. ಒಮ್ಮೆ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆ ಪ್ರದೇಶದಲ್ಲಿ ತಂದು, ಅಲ್ಲಿ ಮಾರಾಟ ಮಾಡಿದರೆ ಯಾವುದೇ ಒಂದು ವಸ್ತುವನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ಕಚ್ಚಾ ವಸ್ತುವನ್ನು ಒಳಗೊಂಡಂತೆ, ಲೈಸೆನ್ಸ್ ಇಲ್ಲದೆ ಮಾರುಕಟ್ಟೆ ಪ್ರದೇಶದೊಳಗೆ ಕೃಷಿ ಉತ್ಪನ್ನವನ್ನು ಮಾರಾಟ ಮಾಡಲು ಅಥವಾ ಖರೀದಿಸಲು ಯಾರೇ ವ್ಯಕ್ತಿಗೂ ಅವಕಾಶವಿಲ್ಲದಿರುವುದರಿಂದ ಅವುಗಳ ಮೇಲೆ ಮಾರುಕಟ್ಟೆ ಶುಲ್ಕವನ್ನು ವಿಧಿಸಬೇಕಾಗುತ್ತದೆ ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.*

*20. ಮುಂದುವರೆದು, ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಡುತ್ತದೆ: (ಕೃಷಿ ಉಪಾಜ್ ಮಂಡಿ ಪ್ರಕರಣ)*

*"32. ಪ್ರತ್ಯರ್ಜಿದಾರ ಗಿರಣಿಗಳು ಬಿದಿರಿನ ಬೊಂಬುಗಳನ್ನು ಮಾರಾಟ ಮಾಡಲು ಅಥವಾ ಕಾಗದ ತಯಾರಿಕೆಗಾಗಿ ಕಚ್ಚಾ ವಸ್ತುಗಳಂತೆ ಬಳಸಲು ಖರೀದಿಸಿದನೇ ಎಂಬುದು ಈ ಉದ್ದೇಶಕ್ಕಾಗಿ ಮುಖ್ಯವಲ್ಲ. ಮಾರುಕಟ್ಟೆ ಶುಲ್ಕಗಳನ್ನು ಸಂದಾಯ ಮಾಡುವ ಪ್ರತ್ಯರ್ಜಿದಾರ ಗಿರಣಿಗಳ ಬದ್ಧತೆಯನ್ನು ಆ ಕಾರಣದ ಮೇಲೆ, ಯಾವುದೇ ರೀತಿಯಲ್ಲೂ ನಿರಾಕರಿಸಲಾಗುವುದಿಲ್ಲ.*

*21. ಈ ಪ್ರಕರಣದ ನಿಲುವುಗಳನ್ನು ರಾಮಚಂದ್ರ ಕೈಲಾಶ್ ಕುಮಾರ್ ಹಾಗೂ ಕಂ. -ವಿರುದ್ಧ- ಉತ್ತರ ಪ್ರದೇಶ ಸರ್ಕಾರದಲ್ಲಿನ ಈ ನ್ಯಾಯಾಲಯದ ಸಂವಿಧಾನ ಪೀಠದ ತೀರ್ಪಿನ ಮೂಲಕ ಯಥಾವತ್ತಾಗಿ ಒಳಗೊಂಡಿದ್ದು, ಪ್ರಸ್ತುತ ಪ್ರಕರಣದಲ್ಲಿ ಒಳಗೊಂಡಿರುವಂಥ 1964ರ ಅಧಿನಿಯಮದ ಉಪಬಂಧಗಳನ್ನು ಪರಿಗಣಿಸಿ, ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:*

*"20. . . . . . . ಅಕ್ಕಿ ಗಿರಣಿದಾರನು ಒಂದು ನಿರ್ದಿಷ್ಟ ಮಾರುಕಟ್ಟೆ ಪ್ರದೇಶದಲ್ಲಿ ಭತ್ತವನ್ನು ಖರೀದಿಸಿ, ಸದರಿ ಭತ್ತವನ್ನು ಅಕ್ಕಿಯನ್ನಾಗಿ ಮಾರ್ಪಾಡಿಸಿ, ಮಾರಾಟ ಮಾಡಿದಲ್ಲಿ, ಅಕ್ಕಿ ಗಿರಣಿದಾರನು, 17(iii) (ಬಿ) ಪ್ರಕರಣದ (2)ನೇ ಉಪ-ಖಂಡದಡಿಯಲ್ಲಿ ಕೃಷಿಕ - ಉತ್ಪಾದಕರಿಂದ ತಾನು ಭತ್ತವನ್ನು ಖರೀದಿಸಿದುದರ ಮೇಲೆ ಮಾರುಕಟ್ಟೆ ಶುಲ್ಕವನ್ನು ಸಂದಾಯ ಮಾಡಲು ಬದ್ಧನಾಗಿರಬೇಕಾಗುತ್ತದೆ. ಈತನನ್ನು ಅಕ್ಕಿ ವ್ಯವಹರಣೆಯ*

*ಸಂಬಂಧದಲ್ಲಿ (3)ನೇ ಉಪ–ಖಂಡದಡಿಯಲ್ಲಿ ಮತ್ತೊಮ್ಮೆ ಮಾರುಕಟ್ಟೆ ಶುಲ್ಕವನ್ನು ಸಂದಾಯ ಮಾಡುವಂತೆ ಕೇಳುವಂತಿಲ್ಲ. ಅಲ್ಲದೆ, ನೀಡಲಾದ ಉದಾಹರಣೆಯಲ್ಲಿ ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ಮಾರುಕಟ್ಟೆ ಸಮಿತಿಗೆ ಮುಕ್ತವಾದ ಅವಕಾಶ ನೀಡಲಾಗುವುದಿಲ್ಲ. ಮಾರುಕಟ್ಟೆ ಶುಲ್ಕವನ್ನು ಭತ್ತದ ವ್ಯವಹರಣೆಯ ಸಂಬಂಧದಲ್ಲಿ ವಿಧಿಸಬೇಕಾಗಿರುತ್ತದೆ ಹಾಗೂ ವಸೂಲಿ ಮಾಡಬೇಕಾಗಿದೆ.*

*23. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಚಿಲ್ಲರೆ ವ್ಯಾಪಾರಿಯು, ಸುತ್ತೋಲೆಯಲ್ಲಿ ನಿಗದಿಪಡಿಸಿದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನವನ್ನು ಮಾರಾಟ ಮಾಡುವಂತಿರುವುದಿಲ್ಲ ಹಾಗೂ ಅಂಥ ಚಿಲ್ಲರೆ ವ್ಯಾಪಾರಿಯು ಸುತ್ತೋಲೆಯಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿ ಖರೀದಿ ದಾಸ್ತಾನು ಮಾಡುವಂತಿರುವುದಿಲ್ಲ. ಆದ್ದರಿಂದ 'ಗೃಹ ಬಳಕೆ'ಯ ಅರ್ಥ ವ್ಯಾಪ್ತಿಯನ್ನು ನಿರ್ಬಂಧಿತ ಅರ್ಥದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಹಾಗಾಗಿ, ವೈಯಕ್ತಿಕ ಬಳಕೆಗಾಗಿ ಅಂದರೆ ಖರೀದಿದಾರನ ಕೌಟುಂಬಿಕ ಸದಸ್ಯರ ಬಳಕೆಗಾಗಿಯೇ ಹೊರತು, ಯಾವುದೇ ಉತ್ಪಾದನಾ ಚಟುವಟಿಕೆಗಾಗಿ ಅಲ್ಲ ಎಂಬುದರ ಅರ್ಥ ಚಿಲ್ಲರೆ ವ್ಯಾಪಾರಿಯು ಮಾರಾಟ ಮಾಡುವ ಖರೀದಿ ಹಾಗೂ ದಾಸ್ತಾನಿನ ಮಿತಿಗಳನ್ನು ನಿಗದಿಪಡಿಸಿದ ಹೊರತು ಅದು ಹೆಚ್ಚುವರಿಯೆಂದು ಭಾವಿಸಬೇಕಾಗುತ್ತದೆ. ಪಕ್ಷಕಾರರು, ವಿವಾದಿತ ವಿಷಯದ ಮೇಲೆ ನ್ಯಾಯ ನಿರ್ಣಯಿಸಲು ಪರಿಗಣಿಸಲು ಅಗತ್ಯವಾಗಿದ್ದಂತಹ 1964ನೇ ಅಧಿನಿಯಮದ ಸಂಬಂಧಪಟ್ಟ ಉಪಬಂಧಗಳನ್ನು ಉಚ್ಚ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ. ಸಗಟು ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸುವುದನ್ನು 'ಗೃಹ ಬಳಕೆ'ಗಾಗಿ*

*ಮಾಡಲಾಗಿದೆಯೆಂದು ಅರ್ಥೈಸಲಾಗುವುದಿಲ್ಲ. ನ್ಯಾಯಾಲಯವು ವಾದಗಳನ್ನು ಮೀರಿ ನಿರ್ಣಯ ಕೈಗೊಳ್ಳಲಾಗುವುದಿಲ್ಲ. 'ಗೃಹ ಬಳಕೆ' ಹಾಗೂ 'ವಿದೇಶಿ ವ್ಯಾಪಾರ' ಎಂಬ ಪದಗಳ ಅರ್ಥವು ಪ್ರಸ್ತುತ ಪ್ರಕರಣದಲ್ಲಿನ ವಿವಾದಾಂಶವಾಗಿರುವುದಿಲ್ಲ. 1964ನೇ ಅಧಿನಿಯಮದಡಿಯಲ್ಲಿ 'ಗೃಹ ಬಳಕೆ' ಎಂಬ ಪದಕ್ಕೆ ಖರೀದಿದಾರನ ವೈಯಕ್ತಿಕ ಬಳಕೆ ಅಂದರೆ, ಕೌಟುಂಬಿಕ ಬಳಕೆಗಾಗಿಯೇ ಹೊರತು ವಾಣಿಜ್ಯ ಹಾಗೂ ಕೈಗಾರಿಕಾ ಚಟುವಟಿಕೆಗಳಿಗೆ ಅಲ್ಲ ಎಂಬ ಪರಿಮಿತ ಹಾಗೂ ಸೀಮಿತ ಅರ್ಥವನ್ನು ನೀಡಬೇಕಾಗುತ್ತದೆ.*

12. ಮೇಲಿನ ಪ್ಯಾರಾಗಳ ಓದಿನಿಂದ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು 'ವ್ಯಾಪಾರಿ' ಪರಿಭಾಷೆಯಡಿಯಲ್ಲಿ ಉಪಬಂಧಿಸಿದ ವಿನಾಯಿತಿಯ ಪರಿಧಿಯಿಂದ ಅರ್ಜಿದಾರರ ಸಂಘ ಸಂಸ್ಥೆಯನ್ನು ಹೊರತುಪಡಿಸುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವನ್ನು ಕೋರಲಾಗಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಾಣಿಜ್ಯ ಸಂಸ್ಥೆಯು ತನ್ನ ವ್ಯಾಪಾರದ ಉದ್ದೇಶಕ್ಕಾಗಿ ಮಾಡಿರುವ ಖರೀದಿಯ ಗೃಹ ಬಳಕೆಯ ವಿನಾಯತಿಯೊಳಗೆ ಬರುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದು ಸುಸ್ಪಷ್ಟವಾಗಿರುತ್ತದೆ.

13. ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಲ್ಲಿ, ಅರ್ಜಿದಾರನು, ಕೋಳಿಗಳ ಆಹಾರದ ಉದ್ದೇಶಕ್ಕಾಗಿ ಅಕ್ಕಿನುಚ್ಚು ಹಾಗೂ ಜೋಳಗಳಂಥ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತಿದ್ದು, ಸದರಿ ಉತ್ಪನ್ನಗಳನ್ನು ತರುವಾಯ ಸಂಸ್ಕರಣೆ, ಉತ್ಪಾದನೆಗೆ ಒಳಪಡಿಸಿದ್ದು, ಆ ಉತ್ಪನ್ನವನ್ನು, ತನ್ನ ವ್ಯವಹಾರದ ಚಟುವಟಿಕೆಗಳನ್ನು ವೃದ್ಧಿಸಿಕೊಳ್ಳಲು ಎಂದರೆ ಯಾವುದೇ ವೈಯಕ್ತಿಕ ಬಳಕೆಗಾಗಿಯಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುವುದಕ್ಕಾಗಿಯೇ ಕೋಳಿಗಳಿಗೆ ಆಹಾರ ಉತ್ಪಾದಿಸುವುದಕ್ಕೆ ಬಳಸಿಕೊಂಡಿದ್ದಾನೆ ಎಂಬುದು ನಿರ್ವಿವಾದ.

14. ವಿಷಯದ ಈ ಹಿನ್ನೆಲೆಯಲ್ಲಿ, ***ಕೃಷಿ ಉತ್ಪನ್ನ ಮಂಡಿ ಸಮಿತಿ, ಅಲಹಾಬಾದ್ –ವಿರುದ್ಧ– ಬೈದ್ಯನಾಥ್ ಆಯುರ್ವೇದ್ ಭವನ್ ಪ್ರೈ. ಲಿ ಹಾಗೂ ಮತ್ತೊಬ್ಬರು*** ಮೇಲಿನ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಯಥಾವತ್ತಾಗಿ ಅನ್ವಯವಾಗುತ್ತದೆಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿರುತ್ತದೆ.

ಹಾಗಾಗಿ, ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ. ಇದರಲ್ಲಿ ಮೇಲೆ ನೀಡಲಾದ ಅಭಿಪ್ರಾಯಗಳು, ಪ್ರಸ್ತುತ ಅರ್ಜಿಯ ವಿಲೆಯ ಉದ್ದೇಶಕ್ಕೆ ಸಂಬಂಧಿಸಿದವಾಗಿರುತ್ತವೆ ಹಾಗೂ ಅಧಿವಿಚಾರಣಾ ನ್ಯಾಯಾಲಯವು, ಇದರಲ್ಲಿ ನೀಡಲಾಗಿರುವ ಅಭಿಪ್ರಾಯಗಳಿಂದ ಪ್ರಭಾವಿತವಾಗದೆ ಪ್ರಕರಣವನ್ನು ಅಧಿವಿಚಾರಣೆ ಮಾಡತಕ್ಕದ್ದು.